## 40. ಸ.ಕಿ.ಪ್ರಾ. ಶಾಲೆ, ವಡೇರಕೊಪ್ಪ

### ಶಾಲೆಯ ಹಿನ್ನೆಲೆ :-

ನಾನು ಈ ಶಾಲೆಗೆ ಬಂದ ಸಂದರ್ಭದಲ್ಲಿ ಶಾಲೆಯ ವಾತಾವರಣ, ವ್ಯವಸ್ಥೆ ಸರಿ ಇರಲಿಲ್ಲ ಹಾಗೂ ಅಲ್ಲಿ ಇದ್ದ ಶಿಕ್ಷಕರು ನಿವೃತ್ತಿ ಅಂಚಿನಲ್ಲಿದ್ದರು ಹಾಗಾಗಿ ಅವರಿಗೆ ಶಾಲೆ ಬಗ್ಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ನಾನು ಒಂದು ಬಾರಿ ಶಾಲೆಯನ್ನು ತಿರುಗಿನೋಡಿದೆ. ಹೇಗಾದರೂ ಮಾಡಿ ಈ ಶಾಲೆಯನ್ನು ಅಭಿವೃದ್ಧಿಪಡಿಸಬೇಕು ಎಂದು ಯೋಚಿಸಿದೆ. ಮಾರನೇ ದಿನ ಎಸ್.ಡಿ.ಎಂ.ಸಿ. ಸಭೆ ಕರೆದು, ಶಾಲೆ ಎಂದರೆ ಹೀಗಿರಬೇಕು ಎಂದು ತಿಳಿಹೇಳಿದೆ ಅದಕ್ಕೆ ಅವರು ಶಾಲೆ ಅಭಿವೃದ್ಧಿಗೆ ನಮ್ಮ ಸಹಕಾರ ಇದ್ದೇ ಇದೆ. ನಿಮ್ಮ ಅಭಿವೃದ್ಧಿ ಕೆಲಸಕ್ಕೆ ಕೈ ಜೋಡಿಸುತ್ತೇವೆ ಎಂದು ಹೇಳಿದರು.

### ಶಾಲೆಯಲ್ಲಿ ಕೈಗೊಂಡ ನಾವಿನ್ಯ ಕಾರ್ಯಕ್ರಮ:-

1967ರಲ್ಲಿ ಈ ಶಾಲೆ ಪ್ರಾರಂಭವಾಗಿದೆ. ಈ ಶಾಲೆ 50 ವರ್ಷ ತುಂಬಿದೆ ಎಂಬ ಸಡಗರದಿಂದ ಒಂದು ದೊಡ್ಡ ಕಾರ್ಯಕ್ರಮ ಮಾಡಬೇಕು ತುಂಬಾ ಹೆಮ್ಮೆಯಿಂದ ಶಾಲಾ ಸುವರ್ಣ ಮಹೋತ್ಸವ ಅದ್ದೂರಿ ಕಾರ್ಯಕ್ರಮ ಮಾಡಬೇಕು ಎಂದು ಮೊದಲು ಎಸ್.ಡಿ.ಎಂ.ಸಿ. ಸಭೆ, ಹಳೇ ವಿದ್ಯಾರ್ಥಿಗಳ ಸಭೆ ಹಾಗೂ ಸಂಘ ಸಂಸ್ಥೆಯವರು ಹಾಗೂ ಗ್ರಾಮಸ್ಥರ ಸಭೆ ಕರೆದು ಆ ಸಭೆಯಲ್ಲಿ ಸಮಾರಂಭದ ರೂಪರೇಷೆಗಳನ್ನು ಬಿಡಿಸಿ ಹೇಳಿದೆ ಅದಕ್ಕೆ ಜನ ಸಹಮತ ನೀಡಲಿಲ್ಲ. ಈ ಕಾರ್ಯಕ್ರಮ ಮಾಡುವುದು ತುಂಬಾ ಕಷ್ಟ, ಆಗುವುದಿಲ್ಲ ಎಂದು ಹೇಳಿ ಹೊರಟು ಹೋದರು.

ಶಾಲಾ ಸುವರ್ಣ ಮಹೋತ್ಸವ ಆಚರಿಸಲೇಬೇಕು ಎಂಬ ದೃಢ ಮನಸ್ಸಿನಿಂದ ಎಸ್.ಡಿ.ಎಂ.ಸಿ. ಅಧ್ಯಕ್ಷರ ಮನೆಗೆ ಹೋಗಿ ಅವರನ್ನು ಒಪ್ಪಿಸಿ ಪುನ: ಸಭೆ ಕರೆಯಲು ಪ್ರಯತ್ನಿಸಿದೆ. ಅಂದು ಆ ಸಭೆಗೆ ಜನರು ಯಾರು ಬರಲಿಲ್ಲ. ಇದರಿಂದ ತುಂಬಾ ನಿರಾಸೆಯಾಯಿತು. ಒಂದು ವಾರ ಬಿಟ್ಟು ಎಸ್.ಡಿ.ಎಂ.ಸಿ. ಅಧ್ಯಕ್ಷರು ಶಾಲೆಗೆ ಬಂದರು ಅವರಿಗೆ ಪುನ: ಕಾರ್ಯಕ್ರಮದ ಬಗ್ಗೆ ನೆನಪು ಮಾಡಿದೆ. ಅದಕ್ಕೆ ಅವರಿಂದ ಉತ್ತರ ಸುಮ್ನೆ ಡ್ಯೂಟಿ ಮಾಡಿಕೊಂಡು ಹೋಗಿರಿ ಸಾರ್ ಎಂದು ಹೇಳಿದರು. ಅಧ್ಯಕ್ಷರೇ ಒಂದೇ ಒಂದು, ಇದು ಕೊನೆಯ ಪ್ರಯತ್ನ ಸಭೆ ಕರೆದು ಎಲ್ಲರ ಮನೆಗೆ ಹೋಗಿ ವಿಷಯವನ್ನು ಕರಪತ್ರ ಮೂಲಕ ವಿಷಯ ತಿಳಿಸಿ ಸಭೆ ಕರೆಯಲಾಯಿತು. ಅಂದಿನ ಸಭೆಗೆ ಸುಮಾರು 50 ರಿಂದ 60 ಜನ ಬಂದಿದ್ದರು. ಅವರಿಗೆ ಎಲ್ಲಾ ರೀತಿ ವಿಷಯವನ್ನು ತಿಳಿಸಿ ಮೊದಲು ಈ ಕಾರ್ಯಕ್ರಮ ಆಚರಿಸಲು ಒಂದು ಆಚರಣಾ ಸಮಿತಿ ಮಾಡೋಣ ಅದರಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರನ್ನು ಆಯ್ಕೆ ಮಾಡೋಣ ಎಂದು ವಿಷಯ ತಿಳಿಸಿದೆ ಅದಕ್ಕೆ ಎಲ್ಲರೂ ಒಪ್ಪಿ ಒಂದು ಸಮಿತಿಯನ್ನು ರಚಿಸಲಾಯಿತು. ಒಟ್ಟಾಗಿ ಕಾರ್ಯಕ್ರಮ ನಡಸಲೇಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಕಾರ್ಯಕ್ರಮ ನಡೆಸಲು ಅಂದಾಜು 1,00,000-00(ರೂ.ಒಂದುಲಕ್ಷ) ಬೇಕು ಎಂದು ಅಂದಾಜು ಮಾಡಲಾಯಿತು. ಈ ಗ್ರಾಮದಲ್ಲಿ ಸುಮಾರು 50 ಮನೆ ಇರುವುದರಿಂದ ಸುಮಾರು 20,000 ಮಾತ್ರ ವಂತಿಕೆ ರೂಪದಲ್ಲಿ ವಸೂಲಿ ಮಾಡಬಹುದು. 1 ಲಕ್ಷ ವಸೂಲಿ ಮಾಡಲು ಸಾಧ್ಯವಿಲ್ಲ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಆ ಸಂದರ್ಭದಲ್ಲಿ ನನಗೆ ಒಂದು ಉಪಾಯ ಬಂತು ಯಾರು 5,000-00ರೂ.ಗಿಂತ ಮೇಲ್ಪಟ್ಟು ಹಣ ನೀಡುತ್ತಾರೋ ಅವರ ಹೆಸರನ್ನು ಕಲ್ಲಿನಲ್ಲಿ ಹಾಕಿಸುವುದು ಎಂದು ಹೇಳಲಾಯಿತು. ಆ ಸಭೆಯಲ್ಲಿ ಅಲ್ಲಿ ಒಟ್ಟು 15 ಜನ ಹೆಸರು ಬರೆಸಿದರು. ಇದರಿಂದ ನನಗೆ ಕಾರ್ಯಕ್ರಮ ಮಾಡಲು ತುಂಬಾ ಧೈರ್ಯ ಬಂದಿತು. ಈ ಕಾರ್ಯಕ್ರಮಕ್ಕೆ ಒಟ್ಟು 30 ಜನ 5,000-00ರೂ.ನಂತೆ ದೇಣಿಗೆ ನೀಡಿದರು. ಒಬ್ಬ ಆ ಊರಿನಿಂದ 2,60,000-00 ದೇಣಿಗೆ ರೂಪದಲ್ಲಿ ವಸೂಲಿ ಮಾಡಿ 23-12-2017ರಂದು ಅದ್ದೂರಿ ಕಾರ್ಯ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ 2,10,000-00 ಖರ್ಚು ಮಾಡಲಾಯಿತು. 50,000-00ರೂ. ಉಳಿತಾಯ ಮಾಡಲಾಯಿತು. ಉಳಿತಾಯ ಹಣದಲ್ಲಿ ಒಂದು ಕಂಪ್ಯೂಟರ್ ಹಾಗೂ ಶಾಲೆಗೆ ಅವಶ್ಯಕವಿರುವ ಸಾಮಾಗ್ರಿಗಳನ್ನು ತರಲಾಯಿತು. ಈ ಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರಮ ಶಾಲೆಯ ಸುವರ್ಣ ಅಕ್ಷರದಲ್ಲಿ ಬರೆದಿಡುವಂತೆ ಅದ್ದೂರಿ ಕಾರ್ಯಕ್ರಮ ಇದು ಆಗಿತ್ತು.

**ದಾನಿಗಳು :–**

| | | |
|---|---|---|
| 1. ಶಾಲೆಗೆ ಬಣ್ಣ ಹೊಡೆಸಿದ್ದ ಖರ್ಚು | – | 40,000–00 |
| 2. ಶಾಲೆಗೆ ಒಂದು ಕಂಪ್ಯೂಟರ್ | – | 28,000–00 |
| 3. ಶಾಲಾ ಮುಂಭಾಗದ ಕಮಾನು ಬೋರ್ಡ್ | – | 17,000–00 |
| 4. ಶಾಲೆಯ ದೊಡ್ಡ ಗೇಟ್ | – | 15,000–00 |
| 5. ಸುವರ್ಣ ಮಹೋತ್ಸವದ ಕಾರ್ಯಕ್ರಮದ ಊಟದ ಖರ್ಚು | | 15,000–00 |
| 6. ಶಾಲೆಗೆ ಇತರೆ ಸಾಮಾಗ್ರಿಗಳು | – | 10,000–00 |
| 7. ಶಾಲಾ ಸುವರ್ಣ ಮಹೋತ್ಸವ | | 1,50,000–00 |







